# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗಾಳಿ ಆಂಜನೇಯ ಸ್ವಾಮಿ ವಾರ್ಡ್ ಸಂಖ್ಯೆ-157, ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಉದ್ಯಾನವನ, ಹೊಸಹಳ್ಳಿ ಮೆಟ್ರೋ,
ಬ್ಯಾಟರಾಯನಪುರ, ಬೆಂಗಳೂರು-560 026

---

ಸಂಖ್ಯೆ: ಸ.ಕಾ.ನಿ.ಅ/ಗಾಆ/ಪಿಆರ್/10/22-23 ದಿನಾಂಕ:-21-05-2022

21/05/22

## ವಾರ್ಡ್ ಸಂಖ್ಯೆ : 157 ವಾರ್ಡ್ ಸಭೆಯ ನಡವಳಿ

### ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ:

| ಕ್ರಮ ಸಂಖ್ಯೆ | ಅಧಿಕಾರಿಗಳು ಮತ್ತು ಸದಸ್ಯರುಗಳ ಹೆಸರು | ಪದನಾಮ/ಅಧ್ಯಕ್ಷರು | ಹಾಜರಾತಿ |
|---|---|---|---|
| 1 | ಶ್ರೀ ಮಂಗಲ್ ದಾಸ್ | ನೋಡೆಲ್ ಅಧಿಕಾರಿ | ಹಾಜರಾಗಿರುತ್ತಾರೆ |
| 2 | ಶ್ರೀ. ಮಂಜುನಾಥ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ. | ಹಾಜರಾಗಿರುತ್ತಾರೆ |
| 3 | ಶ್ರೀ. ಬೆಟ್ಟಸ್ವಾಮಿ | ಸ್ಯಾ.ಧಫೇದಾರ್ | ಹಾಜರಾಗಿರುತ್ತಾರೆ |
| 4 | ಶ್ರೀ. ಮಂಜುನಾಥ್ | ಸದಸ್ಯರು | ಹಾಜರಾಗಿರುತ್ತಾರೆ |
| 5 | ಭಾನುಶ್ರೀ | ಕಿ.ಅ (ಗುತ್ತಿಗೆ ಆದಾರದ ಮೇಲೆ) | ಹಾಜರಾಗಿರುತ್ತಾರೆ |
| 6 | ಶ್ರೀಮತಿ. ಉಮಾ ವೇಣುಗೋಪಾಲ್.ಬಿ.ಹೆಚ್. | ಮಾಜಿ ಪಾಲಿಕೆ ಸದಸ್ಯರು | ಹಾಜರಾಗಿರುತ್ತಾರೆ |
| 7 | ಶ್ರೀ.ಮುನಿರಾಜು | ಕಿ.ಆ.ಪರಿವೀಕ್ಷಕರು | ಹಾಜರಾಗಿರುತ್ತಾರೆ |
| 8 | ಶ್ರೀ.ಹೆಚ್.ರಾಮಕೃಷ್ಣ | ಹಿ.ಆ.ಪರಿವೀಕ್ಷಕರು | ಹಾಜರಾಗಿರುತ್ತಾರೆ |
| 9 | ಶ್ರೀ. ರಾಘವೇಂದ್ರ | ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಾಗಿರುತ್ತಾರೆ |
| 10 | ಶ್ರೀ. ಎ.ಎಂ. ರಾಮಕೃಷ್ಣಯ್ಯ | ಸದಸ್ಯರು | ಹಾಜರಾಗಿರುತ್ತಾರೆ |
| 11 | ಶ್ರೀ. ಕೃಷ್ಣಮೂರ್ತಿ | ಸದಸ್ಯರು | ಹಾಜರಾಗಿರುತ್ತಾರೆ |
| 12 | ಶ್ರೀ, ರಂಗಪ್ಪ | ಸದಸ್ಯರು | ಹಾಜರಾಗಿರುತ್ತಾರೆ |
| 13 | ಶ್ರೀ. ಶ್ರೀನಾಥ್ | ಸದಸ್ಯರು | ಹಾಜರಾಗಿರುತ್ತಾರೆ |
| 14 | ಶ್ರೀ. ಬಿ.ಕೆ. ಕೃಷ್ಣ | ಸದಸ್ಯರು | ಹಾಜರಾಗಿರುತ್ತಾರೆ |
| 15 | ಶ್ರೀ. ಕೇಶವ ಮೂರ್ತಿ | ಸದಸ್ಯರು | ಹಾಜರಾಗಿರುತ್ತಾರೆ |

ದಿನಾಂಕ:-21-05-2022 ರಂದು ಮಾನ್ಯ ನೋಡಲ್ ಅಧಿಕಾರಿಗಳು ವಾರ್ಡ್ ಸಂಖ್ಯೆ : 157 ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಮತ್ತು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

**ಮು.ತಿ.ನೋ__..**

ಈ ಹಿಂದಿನ ಸಭೆಯಲ್ಲಿ ಬಂದಿದ್ದ ದೂರುಗಳ ಮೇಲೆ ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸುತ್ತ ಪ್ರಸ್ತುತ ಕುಂದು ಕೊರತೆಗಳ ಬಗ್ಗೆ ಚರ್ಚೆ ಪ್ರಾರಂಭಿಸಲಾಯಿತು.

| ಕ್ರ.ಸಂ | ವಿಷಯ | ತೀರ್ಮಾನ |
|---|---|---|
| 1 | ಬ್ಯಾಟರಾಯನಪುರ ಸಿ ಅಡ್ಡರಸೆ ಮತ್ತು 1ನೇ ಮುಖ್ಯರಸ್ತೆಯ ಅಂಗನವಾಡಿಗಳ ಶಾಲೆ ಮತ್ತು ಕಟ್ಟಡಗಳು ಶಿಥಿಲಗೊಂಡಿರುವುದರಿಂದ ಅದನ್ನು ಹೊಡೆದು ಹಾಕಿ ಹೊಸದಾಗಿ ಕಟ್ಟಡವನ್ನು ಕಟ್ಟುವಂತೆ ಶ್ರೀ.ಮಂಜುನಾಥ್ ರವರು ಕೋರಿದರು. | ಕ್ರಮ : ಈ ವಿಚಾರವಾಗಿ ಮಾನ್ಯ ಅಧ್ಯಕ್ಷರು ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಕರೆಯುವುದಾಗಿ ತಿಳಿಸಿದರು. |
| 2 | ಶ್ರೀಮತಿ. ಉಮಾ ವೇಣುಗೋಪಾಲ್.ಬಿ.ಹೆಚ್., ಮಾಜಿ ಪಾಲಿಕೆ ಸದಸ್ಯರವರು ಪಾಪಣ್ಣ ಮಟನ್ ಸ್ಟಾಲ್ 'ಎ' ಅಡ್ಡರಸ್ತೆ, ನರಸಿಂಹಯ್ಯ ಕಾಲೋನಿ, ಬ್ಯಾಟರಾಯನಪುರ ಎಂ.ಎಂ. ರಸ್ತೆಯ 3ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ರಾಜೀವ್ ರಸ್ತೆ, ಎಂ.ಎಂ.ರಸ್ತೆಯ ಡೆಡ್ ಅಂಡ್ ರಸ್ತೆ, ಗಣಪತಿನಗರ 3ನೇ ಅಡ್ಡರಸ್ತೆ, ಹೊಸಕೆರೆಹಳ್ಳಿ ರಸ್ತೆ, ಸಪ್ತಗಿರಿ ಚಿಕನ್ ಸ್ಟಾಲ್ ರಸ್ತೆ, ಪಟೇಲ್ ಪಾಂಡು ಶಾಲೆಯ ಎದುರು, ರಾಘವನಗರ ಅಂಬೇಡ್ಕರ್ ಭವನ ಮತ್ತು ಸಂಜಯನಗರ ಸ್ಲಂಗಳಲ್ಲಿ ಡಿ ಸಿಲ್ಟಿಂಗ್‌ನ್ನು ತುರ್ತಾಗಿ ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಿದರು | ಕ್ರಮ : ಈ ವಿಚಾರವಾಗಿ ಕೂಡಲೇ ಕ್ರಮವನ್ನು ಕೈಗೊಳ್ಳುವುದಾಗಿ ನೋಡೆಲ್ ಅಧಿಕಾರಿರವರು ತಿಳಿಸಿದರು. |
| 3 | ಟೆಲಿಕಾಂ ಲೇಔಟ್ ಮತ್ತು ನ್ಯೂ ಟಿಂಬರ್ ಯಾರ್ಡ್ ಲೇಔಟ್‌ನ ವ್ಯಾಪ್ತಿಯಲ್ಲಿ ಕಟ್ಟಡದ ಕಾಮಗಾರಿಗಳಿಗೆ ಬಳಸುವ ಸಾಮಗ್ರಿಗಳನ್ನು ರಸ್ತೆಯಲ್ಲಿ ಎಲ್ಲೆಂದರಲ್ಲಿ ಹಾಕುತ್ತಿದ್ದು ಇದರಿಂದ ವಾಹನಗಳ ಸಂಚಾರಕ್ಕೆ ಮತ್ತು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ ಎಂದು ಶ್ರೀ. ಮಂಜುನಾಥ್ ರವರು ತಿಳಿಸಿದರು. | ಕ್ರಮ : ಈ ವಿಚಾರವಾಗಿ ಸಾಹಯಕ ಅಭಿಯಂತರವರಿಗೆ ಕ್ರಮಕೈಗೊಳ್ಳಲು ತಿಳಿಸುವುದಾಗಿ ನೋಡೆಲ್ ಅಧಿಕಾರಿರವರು ತಿಳಿಸಿದರು. |
| 4 | ಹೊಸಕೆರೆಹಳ್ಳಿ ರಸ್ತೆ ಮತ್ತು ಸಂಜಯನಗರ ಪಾಲಿಕೆಯ ಖಾಲಿ ಜಾಗದಲ್ಲಿ ಕಾಂಗ್ರೇಸ್ ಗಿಡಗಳು, ಕಸಗಳು ಮತ್ತು ಹಾವುಗಳು ಇನ್ನಿತರ ವಿಷ ಜಂತುಗಳು ವಾಸವಾಗಿರುವುದರಿಂದ ಸ್ಥಳೀಯ ಸಾರ್ವಜನಿಕರಗೆ ತೊಂದರೆಯಾಗುತ್ತಿರುವುದರಿಂದ ಕೂಡಲೇ ಸ್ವಚ್ಛ ಮಾಡುವಂತೆ ಶ್ರೀ. ಮಂಜುನಾಥ್ ಮತ್ತು ಶ್ರೀ. ರಂಗನಾಥ್ ರವರು ತಿಳಿಸಿದರು. | ಕ್ರಮ : ಸದರಿ ಇಲಾಖೆಗೆ ಈ ವಿಚಾರವಾಗಿ ಪತ್ರ ಬರೆಯುವುದಾಗಿ ನೋಡೆಲ್ ಅಧಿಕಾರಿರವರು ತಿಳಿಸಿದರು. |

ಪು.ತಿ.ನೋ.....

| | | |
|---|---|---|
| 5 | ಸಂಜಯನಗರ ರಸ್ತೆಗೆ ಮೆಟ್ಟಿಲುಗಳನ್ನು ಹಾಕಿಸಬೇಕೆಂದು ಶ್ರೀ. ಮಂಜುನಾಥ್ ರವರು ತಿಳಿಸಿದರು. | ಕ್ರಮ : ಕ್ರಮಕೈಗೊಳ್ಳುವುದಾಗಿ ತಿಳಿಸಿದರು. |
| 6 | ರಾಘವನಗರ ಮತ್ತು ಸಂಜಯನಗರದಲ್ಲಿ ಕೊಳವೆ ಬಾವಿಗಳನ್ನು ಕೊರೆಸುವಂತೆ ಶ್ರೀ.ರಾಮಕೃಷ್ಣಯ್ಯ ರವರು ಕೋರಿದರು. | ಕ್ರಮ : ಸದರಿ ವಿಚಾರವಾಗಿ ಕ್ರಮಕೈಗೊಳುವಂತೆ ನೋಡೆಲ್ ಅಧಿಕಾರಿರವರು ತಿಳಿಸಿದರು. |
| 7 | ಆವಲಹಳ್ಳಿ 1ನೇ ಮುಖ್ಯರಸ್ತೆ ಮತ್ತು ರಾಜಲಕ್ಷ್ಮೀ ಸೌಂಡ್ಸ್ & ಲೈಟಿಂಗ್ಸ್ ಹಿಂಭಾಗದ ಹತ್ತಿರ ಕುಡಿಯುವ ನೀರಿನ ಘಟಕವು ಸ್ಥಗಿತಗೊಂಡಿರುವ ಕಾರಣ ಸದರಿ ಜಾಗದಲ್ಲಿ ಕಸವನ್ನು ಹಾಕುತ್ತಿರುವುದರಿಂದ ಸೊಳ್ಳೆ ಮತ್ತು ಆರೋಗ್ಯದ ಸಮಸ್ಯೆ ಕಾಣುತ್ತಿರುವುದಾಗಿ ಶ್ರೀ. ಕೇಶವ ಮೂರ್ತಿ ರವರು ತಿಳಿಸಿದರು. | ಕ್ರಮ : ಕ್ರಮಕೈಗೊಳ್ಳುವುದಾಗಿ ತಿಳಿಸಿದರು. |
| 8 | ಹೊಸಕೆರೆಹಳ್ಳಿಯಲ್ಲಿ ಅನಧಿಕೃತವಾಗಿ ಕಾರ್ ಪಾರ್ಕಿಂಗ್ ಮಾಡುತ್ತಿರುವುದರಿಂದ ಪುಟ್ಟ್ ಪಾತ್‌ನ ಕಲ್ಲುಗಳು ಹೊಡೆದು ಹೋಗಿರುವುದಾಗಿ ಶ್ರೀ. ಮಂಜುನಾಥ್ ರವರು ತಿಳಿಸಿದರು | ಕ್ರಮ : ಸದರಿ ಇಲಾಖೆಗೆ ಈ ವಿಚಾರವಾಗಿ ಕ್ರಮಕೈಗೊಳುವಂತೆ ನೋಡೆಲ್ ಅಧಿಕಾರಿರವರು ತಿಳಿಸಿದರು. |
| 9 | ಬ್ಯಾಟರಾಯನಪುರ ಮತ್ತು ಟೆಲಿಕಾಂ ಲೇಔಟ್ ನಂದಿನಿ ಪಾರಲರ್ ಹತ್ತಿರ ಬೀದಿ ದೀಪಗಳು ಇಲ್ಲವೆಂದು ಶ್ರೀ. ಕೇಶವ ಮೂರ್ತಿ ರವರು ತಿಳಿಸಿದರು. | ಕ್ರಮ : ಸದರಿ ಇಲಾಖೆಗೆ ಈ ವಿಚಾರವಾಗಿ ಕ್ರಮಕೈಗೊಳುವಂತೆ ನೋಡೆಲ್ ಅಧಿಕಾರಿರವರು ತಿಳಿಸಿದರು. |
| 10 | ಸ್ಯಾಟ್ ಲೈಟ್ ಹತ್ತಿರ ಇರುವ ಕೆ.ಎಸ್.ಆರ್.ಟಿ.ಸಿ. ಬಸ್ಸ್ ಡಿಪೋ ರವರು ಎಲ್ಲೆಂದರಲ್ಲಿ ಕಸವನ್ನು ಮೋರಿಗೆ ಹಾಕುತ್ತಿರುವುದಾಗಿ ಶ್ರೀ. ಕೇಶವ ಮೂರ್ತಿ ರವರು ತಿಳಿಸಿದರು. | ಕ್ರಮ : ಸದರಿ ಇಲಾಖೆಗೆ ಈ ವಿಚಾರವಾಗಿ ಕ್ರಮಕೈಗೊಳುವಂತೆ ನೋಡೆಲ್ ಅಧಿಕಾರಿರವರು ತಿಳಿಸಿದರು. |

ಕೊನೆಯದಾಗಿ ಬೆಸ್ಕಾಂ ಅಧಿಕಾರಿಗಳು ಮತ್ತು ಪೊಲೀಸ್ ಇಲಾಖೆಯವರು ಸಭೆಗೆ ಪದೇ ಪದೇ ಗೈರು ಹಾಜುರಾಗುತ್ತಿರುದಾಗಿ ಮಾತನಾಡಿ ಸದರಿ ಇಲಾಖೆಗೆ ನೋಟೀಸ್‌ನ್ನು ನೀಡುವಂತೆ ತಿಳಿಸುತ್ತಾ ನೋಡೆಲ್ ಅಧಿಕಾರಿರವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಮಾಡಿದರು.

ಕಾರ್ಯದರ್ಶಿ
ವಾರ್ಡ್ ಸಂಖ್ಯೆ : 157 (ಗಾಳಿ ಆಂಜನೇಯ ಸ್ವಾಮಿ)

**ಪ್ರತಿಯನ್ನು:-**

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
4. ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.